**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 804 |
| 2 | ಸದಸ್ಯರ ಹೆಸರು | ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | 11.03.2020 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯಲ್ಲಿ ದರಖಾಸ್ತು ಪೌತಿ ಆಂದೋಲನದ ನಂತರ ದುರಸ್ತಿಯಾದ ಜಮೀನುಗಳೆಷ್ಟು; | ಬಾಕಿ ಇರುವ ದರಖಾಸ್ತು ಪ್ರಕರಣಗಳ ವಿಲೇವಾರಿ ಕುರಿತು ರಾಮನಗರ ಜಿಲ್ಲೆಯಲ್ಲಿ ಆಂದೋಲನ ಹಮ್ಮಿಕೊಂಡಿದ್ದು, ಇದರಲ್ಲಿ 238 ಪ್ರಕರಣಗಳಲ್ಲಿ ಒಟ್ಟು 366 ಎಕರೆ 36 ಗುಂಟೆ ಪ್ರದೇಶವನ್ನು ದುರಸ್ತಿಪಡಿಸಲಾಗಿದೆ.<br><br>ಅದೇ ರೀತಿಯಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯಲ್ಲಿ ಒಟ್ಟು 259 ಬ್ಲಾಕ್ (ಪ್ರಕರಣ)ಗಳನ್ನು ದುರಸ್ತಿಪಡಿಸಲಾಗಿದೆ. |
| ಆ) | ಏಕ ವ್ಯಕ್ತಿ ಪ್ರಕರಣದಡಿ ದುರಸ್ತಿಗೊಂಡ ಜಮೀನುಗಳೆಷ್ಟು; ಇವುಗಳಲ್ಲಿ ಬಾಕಿ ಇರುವ ಪ್ರಕರಣಗಳೆಷ್ಟು; ಇದಕ್ಕೆ ಇರುವ ನಿಯಮಾವಳಿಗಳೇನು; ಇದರಿಂದ ಸಾರ್ವಜನಿಕರಿಗೆ ತೊಂದರೆ/ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಪೂರ್ಣ ಮಾಹಿತಿ ನೀಡುವುದು) | **ಏಕವ್ಯಕ್ತಿ ಪ್ರಕರಣದಡಿ ದುರಸ್ತಿಗೊಂಡ ಮತ್ತು ಬಾಕಿ ಇರುವ ಪ್ರಕರಣಗಳ ವಿವರ** (see table below) |

**ಏಕವ್ಯಕ್ತಿ ಪ್ರಕರಣದಡಿ ದುರಸ್ತಿಗೊಂಡ ಮತ್ತು ಬಾಕಿ ಇರುವ ಪ್ರಕರಣಗಳ ವಿವರ**

| ಜಿಲ್ಲೆ | ಏಕವ್ಯಕ್ತಿ ಪ್ರಕರಣದಡಿ ದುರಸ್ತಿಗೊಂಡ ಪ್ರಕರಣಗಳು | ಏಕವ್ಯಕ್ತಿ ಪ್ರಕರಣದಡಿ ದುರಸ್ತಿಗೆ ಬಾಕಿ ಇರುವ ಪ್ರಕರಣಗಳು |
|---|---|---|
| ರಾಮನಗರ | 67 | 99 |
| ಬೆಂಗಳೂರು ಗ್ರಾಮಾಂತರ | 394 | 164 |

**ಏಕವ್ಯಕ್ತಿ ಪ್ರಕರಣದಡಿ ಪೋಡಿ ದುರಸ್ತಿ ಪಡೆಸಲು ಇರುವ ನಿಯಮಗಳು**

1) ಜಮೀನಿನ ಆಕಾರಬಂದು ಮತ್ತು ಪಹಣಿಗಳಲ್ಲಿ ದಾಖಲಾಗಿರುವ ವಿಸ್ತೀರ್ಣ ತಾಳೆಯಾಗಿರಬೇಕು
2) ಪಹಣಿಯ ಕಾಲಂ 3 ಮತ್ತು 9 ರಲ್ಲಿ ನಮೂದಿಸಿರುವ ವಿಸ್ತೀರ್ಣ ತಾಳೆಯಾಗಿರಬೇಕು
3) ಸಂಬಂಧಿಸಿದ ಜಮೀನಿನ ಭೂದಾಖಲೆಗಳು ಲಭ್ಯವಿರಬೇಕು
4) ಕಂದಾಯ ಇಲಾಖೆಯಿಂದ ನಿಗಧಿತ ನಮೂನೆ 1 ರಿಂದ 5ನ್ನು ಭರ್ತಿ ಮಾಡಿ ದೃಢೀಕರಿಸಿ ಭೂಮಾಪನ ಕಛೇರಿಗೆ ಸಲ್ಲಿಸಬೇಕು. ಮತ್ತು
5) ವಿಶೇಷ ಸಂಧರ್ಭದಲ್ಲಿ ಮಾತ್ರ ಏಕವ್ಯಕ್ತಿ ಪ್ರಕರಣದಡಿ ಸಂಬಂಧಿಸಿದ ತಹಶೀಲ್ದಾರರ ಪೂರ್ವಾನುಮತಿಯೊಂದಿಗೆ ಮಂಜೂರಿದಾರರ ಮಂಜೂರಿ ವಿಸ್ತೀರ್ಣ ಮತ್ತು ಅನುಭವ ಆಧರಿಸಿ ಕರ್ನಾಟಕ ಭೂಕಂದಾಯ ನಿಯಮಗಳು, 1966 ರ ನಿಯಮ 50 ರ ಪ್ರಕಾರ ಅಳತೆ ಮಾಡಿ ದರಖಾಸ್ತು ಪೋಡಿ ಮಾಡಲಾಗುವುದು

**ಸಂಖ್ಯೆ: ಕಂಇ 45 ಎಸ್ಎಸ್‌ಸಿ 2020**

(ಆರ್. ಅಶೋಕ)
ಕಂದಾಯ ಸಚಿವರು